**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MIS** 24/2025 **PW-** 1

**ದಿಃ10.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ನಂಬರ ನಂಬರ 4 ಮತ್ತು 5 ಪರ ವಕೀಲರಾದ ಶ್ರೀ ಬಿ ಎಫ ಮೆಂಗುಡಿರವರಿಂದ.**

ವಾದಿ ಸಂಸ್ಥೆಯವರು ಪ್ರತಿವಾದಿಗಳ ಮೇಲೆ ದೂರು ಸಲ್ಲಿಸಿದ್ದರು ಎಂದರೆ ಸರಿ. ಈ ಬಗ್ಗೆ ಎದುರುದಾರರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಆ ದೂರನ್ನು ರದ್ದುಪಡಿಸಲು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯವು ಇದು ಸಿವಿಲ್ ಸ್ವರೂಪದ್ದಾಗಿದೆ ಎಂದು ಆದೇಶ ಮಾಡಿದ್ದರು ಎಂದರೆ ಸಾಕ್ಷಿ ಇಲ್ಲ ನೀವು ತಪ್ಪು ಮಾಡಿರುತ್ತೀರಾ investigation face ಮಾಡಿ ಎಂದು ಕಳುಹಿಸಿರುತ್ತಾರೆ ಎನ್ನುತ್ತಾರೆ. ನಂತರ ಸದರಿ ಪೋಲೀಸರು ತನಿಖೆ ಪೂರೈಸಿ ಅದು ಸಿವಿಲ್ ಸ್ವರೂಪದ ವಿವಾದ ಇರುವ ಕಾರಣ ಅದರಲ್ಲಿ "**ಬಿ**" ಅಂತಿಮ ವರದಿ ಸಲ್ಲಿಸಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಬಿ ರಿಪೋರ್ಟನ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಶಾನೆ ಆರ 1 ಎಂದು ಗುರ್ತಿಸಲಾಯಿತು. ಈ ಎಲ್ಲ ವಿಚಾರ ಗೊತ್ತಿದ್ದರು ನಾನು ಎದುರುದಾರರ ವಿರುದ್ಧ ಪ್ರಕರಣಗಳ ಮೇಲೆ ಪ್ರಕರಣಗಳನ್ನು ಸಲ್ಲಿಸುತ್ತಾ ಕಿರುಕುಳ ಕೊಡುತ್ತಿದ್ದೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಪ್ರಕರಣ ಚಾಲ್ತಿಯಲ್ಲಿದ್ದಾಗ ಪೂಜಾರ ಮಹಾದೇವಗೌಡ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಗೊತ್ತಿದ್ದರು ನಾನು ಅವರ ವಾರಸುದಾರರನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲವೆಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

(ಎದುರುದಾರ ನಂಬರ 1 ರಿಂದ 3 ರವರ ವಕೀಲರು ಮೇಲೆ ಹೇಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.)

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ